ಹಿಂದಿನ ಅಭ್ಯಾಸಗಳೋ ಏನೋ, ಈಗಲೂ ಮಳೆ ಬಂದರೆ ಬಾವಿ ಇಲ್ಲದಿದ್ದರೂ ಮಳೆನೀರಿನ ಸಂಪ್ ತುಂಬಿದೆಯೋ ಇಲ್ಲವೋ ಎಂದು ನೋಡುವುದನ್ನು ಮರೆಯೋಲ್ಲ.

ಪದವಿ ಕಾಲೇಜಿನಲ್ಲಿ ಇದ್ದಾಗ ಕೊಡೆ ಒಯ್ಯುವುದನ್ನು ಮರೆತಿದ್ದೆನೆಂದು ಅಮ್ಮ ಕಾಲೇಜಿಗೇ ಧಾವಿಸಿ ತರಗತಿಯಲ್ಲಿದ್ದ ನನಗೆ ಕೊಡೆ ತಂದುಕೊಟ್ಟಾಗ 'ಅಮ್ಮ ಯಾಕೆ ಇಷ್ಟು ಒದ್ದಾಡ್ತಾಳೆ? ಸ್ನೇಹಿತರ ಮುಂದೆ ಎಷ್ಟು ಅವಮಾನ ಆಯ್ತು' ಎಂದುಕೊಂಡಿದ್ದ ನನಗೆ, ಅಮ್ಮನ ಆತಂಕ ಏನು ಎನ್ನುವುದು ಸಾಕಷ್ಟು ಮಳೆಗಾಲಗಳು ಕಳೆದ ನಂತರ ಅರ್ಥವಾಗಿದೆ!

ಒಂದು ಬಾರಿ ತರಗತಿ ನಡೆಯುತ್ತಿದ್ದಾಗ ಕಿಟಕಿ ಪಕ್ಕದಲ್ಲಿ ಕುಳಿತು ಮಳೆ ನೋಡುವುದರಲ್ಲಿ ತಲ್ಲೀನಳಾಗಿದ್ದ ನನ್ನನ್ನು ಪ್ರಾಧ್ಯಾಪಕರು 'ಅನುರಾಧಾ, ಕ್ಯಾನ್ ಯು ಎಕ್ಸ್‌ಪ್ಲೇನ್ ದಿಸ್ ಲಾಜಿಕ್?' ಎಂದು ಪ್ರಶ್ನಿಸಿದಾಗ 'ಮಳೆ ಲಾಜಿಕ್ ಯಾಕೆ ಕೇಳ್ತಾ ಇದಾರೆ?' ಎಂದು ಒಂದು ಕ್ಷಣ ತಬ್ಬಿಬ್ಬಾದರೂ ಪಕ್ಕದಲ್ಲಿದ್ದ ನನ್ನ ಗೆಳತಿ ಗಿರಿಜೆ ಪಕ್ಕೆ ತಿವಿದಿದ್ದರಿಂದ ನಾವು ಲಾಜಿಕ್ ಡಿಸೈನ್ ತರಗತಿಯಲ್ಲಿರುವುದು ಸಕಾಲಕ್ಕೆ ನೆನಪಿಗೆ ಬಂದು ಹೇಗೋ ಪಾರಾಗಿದ್ದು ಕೂಡಾ ನನ್ನ ಈ ಮಳೆ ಹುಚ್ಚು ತರಿಸಿದ್ದ ಅವಾಂತರಗಳಲ್ಲಿ ಒಂದು.

ಪದವಿಯ ಕೊನೇ ವರ್ಷದಲ್ಲಿದ್ದ ನನಗೆ ವಿವಾಹ ನಿಶ್ಚಿತಾರ್ಥವಾಯಿತು. ನಿಶ್ಚಿತಾರ್ಥದ ಮರುದಿನ ನಾನು ಹಾಗೂ ಭಾವಿಪತಿ ಪ್ರಸಾದ್ ಸುತ್ತಾಟಕ್ಕೆ ಹೊರಟೆವು. ಸಿನಿಮಾ ನೋಡಿ ತಿಂಡಿ ತಿನ್ನುವ ಹೊತ್ತಿಗೆ ಬೆಂಗಳೂರಿನ ಜನದಟ್ಟಣೆ, ವಾಹನಸಂಚಾರ ಹಾಗೂ ಗದ್ದಲಗಳಿಂದ ಕಂಗೆಟ್ಟಿದ್ದ ನನ್ನನ್ನು ನೋಡಿ ಅನುಕಂಪ ತೋರಿತೋ ಎನ್ನುವಂತೆ ಹಿಂಗಾರಿನ ಮಳೆ ಶುರು ಆಯಿತು. ಎಲ್ಲಾದರೂ ನಿಲ್ಲೋಣವೆಂಬ ಭಾವಿಪತಿಯ ಸಲಹೆಯನ್ನು ನಯವಾಗಿ ತಿರಸ್ಕರಿಸಿ ಮಳೆಯಲ್ಲಿ ನಡೆಯುತ್ತ ಹೊರಟ ನನ್ನನ್ನು ಪ್ರಸಾದ್ ಅಚ್ಚರಿಯಿಂದ ನೋಡಿ ತಾವೂ ನನ್ನ ಜೊತೆ ಹೆಜ್ಜೆ ಹಾಕಿದ್ದರು...

ನನ್ನ ಮದುವೆ ಲಗ್ನ ಕೂಡಿ ಬಂದಿದ್ದೂ ಕೂಡಾ ಮಳೆಗಾಲದಲ್ಲೇ! ಹೊಸ ಜೀವನಕ್ಕೆ ಕಾಲಿರಿಸಿದ ನಮಗೆ ಶುಭಕೋರುವಂತೆ ಸಂಜೆ ಆರತಕ್ಷತೆಯ ವೇಳೆಗೆ ಬಂದ ಭಾರಿಮಳೆ ನಮ್ಮ ದಾಂಪತ್ಯ ಜೀವನಕ್ಕೆ ನಾಂದಿ ಹಾಡಿದ್ದಲ್ಲದೆ, ಬಂದ ಅತಿಥಿಗಳನ್ನು ಎರಡುಗಂಟೆ ಕಾಲ ಮದುವೆಮನೆಯಲ್ಲೇ ಕಟ್ಟಿಹಾಕಿದ್ದು ಅವಿಸ್ಮರಣೀಯ. ವಿವಾಹವಾದ ಮೇಲೆ ಕೊನೇ ಸೆಮಿಸ್ಟರ್ ಮುಗಿಯುವುದಕ್ಕೆ ಇನ್ನೂ ನಾಲ್ಕು ತಿಂಗಳು ಇದ್ದುದರಿಂದ ನನ್ನ ಪ್ರಿಯವಾದ ಮೈಸೂರನ್ನು ಬಿಟ್ಟುಹೋಗಬೇಕಲ್ಲಾ ಎಂದು ಚಿಂತಿಸುತ್ತಿದ್ದ ನನಗೆ ಮತ್ತೊಂದು ಮಳೆಗಾಲ ಮೈಸೂರಿನಲ್ಲೆ ಕಳೆಯುವ ಸದವಕಾಶ ಸಿಕ್ಕಿ ಮನಸ್ಸಿಗೆ ತಂಪೆರೆದಿತ್ತು.

ಮತ್ತೊಂದು ಮಳೆಗಾಲ ಕಳೆಯುವಷ್ಟರಲ್ಲಿ ನಾನು ಹಾಗೂ ಪ್ರಸಾದ್ ದೂರದ ಅಮೆರಿಕೆಗೆ ತೆರಳಲು ಸಿದ್ಧತೆ ನಡೆಸಿದ್ದೆವು. ಕಾಕತಾಳೀಯವೋ ಎಂಬಂತೆ ನಾವು ಹೋಗಿದ್ದು ಆರೆಗನ್ ರಾಜ್ಯದ ಪೋರ್ಟ್‌ಲ್ಯಾಂಡ್ ಪಟ್ಟಣದ ಹತ್ತಿರದ ಬೀವರ್ಟನ್ ಎಂಬ ಊರಿಗೆ. ವರ್ಷಕ್ಕೆ ಎಂಟು ತಿಂಗಳು ಮಳೆಸುರಿಯೊ ಪೋರ್ಟ್ ಲ್ಯಾಂಡ್ ಪ್ರದೇಶವನ್ನು ಅಮೆರಿಕೆಯ ಇತರ ರಾಜ್ಯಗಳಲ್ಲಿ ವಾಸಿಸುತ್ತಿದ್ದ ಸ್ನೇಹಿತರು, ಬಂಧುಗಳು ಬಹಳ ನಿಂದಿಸಿದ್ದರೂ ನಾನು ಸಿಕ್ಕಾಪಟ್ಟೆ ಎಂಜಾಯ್ ಮಾಡಿದ್ದೆ! ಮಲೆನಾಡಿನಂಥ ವಾತಾವರಣ ಇದ್ದ ಬೀವರ್ಟನ್ ಅತಿವಿರಳ ಜನಸಂಖ್ಯೆಯಿದ್ದ ಊರು. ಸ್ನೇಹಪರ, ಶಾಂತಸ್ವಭಾವದ ಜನರಿಂದ ಕೂಡಿದ, ಮೈಸೂರಿನಷ್ಟೇ ಚಿಕ್ಕದಾದ ಈ ಪ್ರದೇಶದ ಜೀವನಶೈಲಿ ಮೈಸೂರನ್ನು ಬಹಳ ಹೋಲುತ್ತಿದ್ದುದರಿಂದ ಬೀವರ್ಟನ್ ಬಹುಬೇಗ ನನಗೆ ಅಪ್ಯಾಯಮಾನವಾಯಿತು.

ಸದಾ ಬೀಳುವ ಮಳೆಯ ದೆಸೆಯಿಂದ ಹಸಿರಿನಿಂದ ಕಂಗೊಳಿಸುವ ಈ ಪ್ರದೇಶದ ವನಶ್ರೀಯ ಪ್ರಕೃತಿ ಸೌಂದರ್ಯ ವರ್ಣಿಸಲಸದಳ. ಮಳೆಗಾಲದಲ್ಲಿ ಬೀಳುವ ಮುಸಲಧಾರೆಯನ್ನು ಕಂಡು ನಾನು ನಿಬ್ಬೆರಗಾಗಿದ್ದೆ. ಮೈಸೂರಿನಲ್ಲಿ ಒಮ್ಮೊಮ್ಮೆ ಅಪರೂಪಕ್ಕೆ ಜೋರುಮಳೆ ಬಂದಾಗ ಆನೆಸೊಂಡಿಲ ಥರ